ಓ ಎಸ್ 26/2014 ಪಿ.ಡಬ್ಲ್ಯೂ: 1

ಇಂದು ದಿಃ 28/1/2020 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ವಾದಿಪರ ವಕೀಲರಿಂದಃ

ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು , ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ ಪಿ 19 | ಒ ಎಸ್ 81/2006 ರಲ್ಲಿನ ದಾವಾ ಪತ್ರ. ದೃ ಪ್ರತಿ. |

ನಿ ಪಿ 19 ರಲ್ಲಿ 1 ನೇ ಪ್ರತಿವಾದಿ ತೀರಿಕೊಂಡ ನಂತರ 2 ರಿಂದ 4 ನೇ ಪ್ರತಿವಾದಿಯರು ಮಾತ್ರ ವಾರಸುದಾರರೆಂದು ಮಾಡಿರುವ ತಿದ್ದುಪಡಿಯನ್ನು ನ್ಯಾಯಾಲಯವು ಪ್ರತ್ಯೇಕವಾಗಿ ಗಮನಿಸಬೇಕೆಂದು ಹಾಗು ಈ ದಾವೆಯ ವಾದಿಯರು ಸದರಿ ನಿ ಪಿ 19 ರಲ್ಲಿನ 1 ನೇ ಪ್ರತಿವಾದಿಯ ವಾರಸುದಾರರು ಆಗಿದ್ದರೂ ಕೂಡ ಈ ದಾವೆಯ ವಾದಿಯರನ್ನು ಸದರಿ ದಾವೆಯಲ್ಲಿ ವಾರಸುದಾರರಾಗಿ ತಂದಿಲ್ಲ ಎಂಬುದನ್ನು ಗಮನಿಸಬೇಕೆಂದು ಪ್ರಾರ್ಥನೆ. ಸಾಕ್ಷಿ ಹೇಳಿರುವ ನಮೂದನ್ನು ಪ್ರತ್ಯೇಕವಾಗಿ ಗುರುತಿಸುವ ಉದ್ದೇಶದಿಂದ ನಿ ಪಿ 19 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಪ್ರತಿವಾದಿಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.